# ಅಪೂರ್ವ ಅಭಿನೇತ್ರಿ ಸುಚಿತ್ರಾ ಸೇನ್

❑ ಕೆ.ಆರ್. ಮೋಹನ್

**ಶ್ರೀರಾಮಕೃಷ್ಣರ ಉದ್ಧಾರಕ ಶಕ್ತಿ ಚಿರಜಾಗೃತವಾಗಿ ಕೆಲಸ ಮಾಡುತ್ತಿದೆ ಎಂಬುದಕ್ಕೆ ಸುಮಾರು ಮೂರು ದಶಕಗಳ ಕಾಲ ಬಂಗಾಳದ ಬೆಳ್ಳಿತೆರೆಯಲ್ಲಿ ಮಿಂಚಿದ ಖ್ಯಾತ ತಾರೆ ಸುಚಿತ್ರಾ ಸೇನ್‌ರ ಜೀವನ ಜ್ವಲಂತ ಸಾಕ್ಷಿಯಾಗಿದೆ. ಈ ಮಹಾನ್ ತಾರೆಯ ಬದುಕಿನ ಮತ್ತೊಂದು ಮುಖವನ್ನು ಪರಿಚಯಿಸಿರುವ ಮೈಸೂರಿನ ನಿವಾಸಿಗಳಾದ ಶ್ರೀಯುತ ಮೋಹನ್‌ರವರು ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆಗಿದ್ದಾರೆ.**

**ಸ್ಪ**ರ್ಶಮಣಿಯು ಸಾಮಾನ್ಯ ಲೋಹವನ್ನು ಚಿನ್ನವಾಗಿ ಪರಿವರ್ತಿಸುವಂತೆ ಶ್ರೀರಾಮಕೃಷ್ಣರ ದಿವ್ಯಸ್ಪರ್ಶ ಎಂಥವರನ್ನೂ ಪುನೀತ ಮಾಡಬಲ್ಲದು. ನಟಿ ವಿನೋದಿನಿ ದಾಸಿ ಇದಕ್ಕೊಂದು ಜ್ವಲಂತ ಉದಾಹರಣೆ. ಬಂಗಾಳಿ ನಾಟ್ಯರಂಗದ ಕಣ್ಮಣಿಯಾಗಿ, 'ಚೈತನ್ಯಲೀಲೆ' ನಾಟಕದಲ್ಲಿ ಚೈತನ್ಯನಾಗಿ ನಟಿಸಿ, ತನ್ನ ಅಭಿನಯ ಕೌಶಲದಿಂದ ಶ್ರೀರಾಮಕೃಷ್ಣರ ಹೃದಯವನ್ನೇ ಗೆದ್ದ ವಿನೋದಿನಿ, ನಿಮ್ನ ವರ್ಗಕ್ಕೆ ಸೇರಿದ ೨೧ ವರುಷದ ಯುವತಿ. ನಾಟಕ ಮುಗಿದ ಮೇಲೆ ಶ್ರೀರಾಮಕೃಷ್ಣರು ವಿನೋದಿನಿಯ ತಲೆಯ ಮೇಲೆ ತಮ್ಮ ಪವಿತ್ರವಾದ ಎರಡು ಹಸ್ತಗಳನ್ನು ಇಟ್ಟು "ನಿನ್ನಲ್ಲಿ ಆಧ್ಯಾತ್ಮಿಕತೆ ಜಾಗೃತವಾಗಲಿ" ಎಂದು ಹರಸಿದರು. ಆವತ್ತಿನ ತಾರೀಖು ೨೧.೯.೧೮೮೪. ಬಂಗಾಳದಲ್ಲಿ ಶ್ರೀರಾಮಕೃಷ್ಣರನ್ನು ನಾಟ್ಯರಂಗದ ಅಧಿದೈವವೆಂದು ಪರಿಗಣಿಸಿ ಅವರ ಭಾವಚಿತ್ರವನ್ನು ಶ್ರದ್ಧಾಭಕ್ತಿಯಿಂದ ನಾಟಕಗೃಹಗಳಲ್ಲಿ ಇಡುವ ಪದ್ಧತಿ ಬಂದಿದೆ. ಮುಂದೆ ವಿನೋದಿನಿ ನಟಿಸಿದ ಹಲವಾರು ಪೌರಾಣಿಕ ನಾಟಕಗಳನ್ನು ಶ್ರೀರಾಮಕೃಷ್ಣರು ನೋಡಿದರು.

೧೬ನೇ ಆಗಸ್ಟ್ ೧೮೮೬ರಂದು ಶ್ರೀರಾಮಕೃಷ್ಣರು ತಮ್ಮ ಲೀಲಾಯಾತ್ರೆಯನ್ನು ಮುಗಿಸಿದರು. ಇದಾದ ಕೇವಲ ನಾಲ್ಕು ತಿಂಗಳಲ್ಲಿ, ಕೀರ್ತಿಯ ಉತ್ತುಂಗದಲ್ಲಿದ್ದ ೨೩ನೇ ವಯಸ್ಸಿನ ವಿನೋದಿನಿ, ರಂಗಭೂಮಿಗೆ ವಿದಾಯ ಹೇಳಿ ಒಂದು ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದಳು. ಮುಂದಿನ ೫೫ ವರ್ಷಗಳನ್ನು ಕಠೋರ ಸಾಧನೆಯಲ್ಲಿ ತೊಡಗಿಸಿಕೊಂಡು ಇಹಜನ್ಮ ಸಾರ್ಥಕ ಮಾಡಿಕೊಂಡಳು. (ಆಕೆಯ ಬಗ್ಗೆ ಕು. ಸ್ವರ್ಣಗೌರಿಯವರು ಬರೆದ ಲೇಖನ ಇದೇ ಪತ್ರಿಕೆಯ ಏಪ್ರಿಲ್ ೨೦೦೧ರ ಸಂಚಿಕೆಯಲ್ಲಿ ಪ್ರಕಟವಾಗಿದೆ.)

ಇಂಗ್ಲಿಷ್‌ನಲ್ಲಿ "ಚರಿತ್ರೆ ಪುನರಾವರ್ತನೆ ಆಗುತ್ತದೆ" ಎಂಬ ಗಾದೆ ಇದೆ. ೧೯ನೆ ಶತಮಾನದಲ್ಲಿ ಹೇಗೆ ಶ್ರೀರಾಮಕೃಷ್ಣರಿಂದ ನಟಿ ವಿನೋದಿನಿ ಪರಿವರ್ತಿತಳಾದಳೋ ಹಾಗೆ ೨೦ನೆ ಶತಮಾನದಲ್ಲಿ ಇನ್ನೊಬ್ಬ ನಟಿಯೂ ಹಾಗೆಯೇ ಪರಿವರ್ತಿತಳಾದಳು. ಆಕೆಯೇ ಬಂಗಾಳಿ ಸಿನೆಮಾದ ಶ್ರೇಷ್ಠ ಅಭಿನೇತ್ರಿ ಸುಚಿತ್ರಾ ಸೇನ್.

ಸುಚಿತ್ರಾ ಸೇನ್ ಅವರು ಈಗಿನ ಬಂಗ್ಲಾದೇಶದ ಪಬ್ನಾ ಊರಿನಲ್ಲಿ ೧೯೩೪ರಲ್ಲಿ ಪ್ರತಿಷ್ಠಿತ ವೈದ್ಯ ಕುಲೀನ ಮನೆತನದಲ್ಲಿ ಜನಿಸಿದರು. ತಂದೆ ಕರುಣಾಮಯ ದಾಸಗುಪ್ತ. ತಾಯಿ ಇಂದಿರಾ. ರಮಾ ಎಂಬುದು ಸುಚಿತ್ರಾ ಅವರ ನಿಜ ನಾಮಧೇಯ. ಪ್ರೀತಿಯಿಂದ ಅವರನ್ನು ಕೃಷ್ಣಾ ಎಂದೂ ಕರೆಯುತ್ತಿದ್ದರು. ಸಹಜ ಸುಂದರಿ. ಅವರಿದ್ದ ಕಡೆ ಸಂಗೀತ, ಹಾಸ್ಯದ ಹೊನಲು. ಆಗಿನ ಸಂಪ್ರದಾಯದ ಪ್ರಕಾರ ೧೩ನೇ ವಯಸ್ಸಿನಲ್ಲಿ ಕೊಲ್ಕತಾದಲ್ಲಿ ಬ್ಯಾರಿಸ್ಟರ್ ಆದಿನಾಥ ಸೇನ್‌ರ ಮಗ ದಿವಾನಾಥ ಸೇನ್‌ರ ಜೊತೆ ವಿವಾಹ. ಒಂದು ಹೆಣ್ಣು ಮಗು ಜನನವಾದ ಮೇಲೆ ಗಂಡನ ಪ್ರೋತ್ಸಾಹ ಹಾಗೂ ಮಾವನ ಅನುಮತಿಯಿಂದ ೧೯೫೩ರಲ್ಲಿ ಚಿತ್ರರಂಗ ಪ್ರವೇಶ. ಆಗ ಆಕೆಯ ವಯಸ್ಸು ೧೯; ಸುಚಿತ್ರಾ ಸೇನ್ ಎಂಬ ಹೊಸ ನಾಮಧೇಯ.

ಮುಂದೆ ೨೫ ವರುಷಗಳಲ್ಲಿ ಸುಮಾರು ೫೩ ಬಂಗಾಳಿ ಸಿನೆಮಾ ಹಾಗೂ ೭ ಹಿಂದಿ ಸಿನೆಮಾಗಳಲ್ಲಿ ಅಭಿನಯಿಸಿದರು. ೧೯೬೨ರ 'ಸಪ್ತಪದಿ' ಎಂಬ ಬಂಗಾಳಿ ಚಿತ್ರ ಇವತ್ತಿಗೂ ಚಿತ್ರನಟಿಯರಿಗೆ ಮಾದರಿಯಾಗಿದೆ. "ಅಸಾಧಾರಣ ಸೌಂದರ್ಯ, ಬುದ್ಧಿ ಕುಶಲತೆ, ಸಮಯಪ್ರಜ್ಞೆ ಮತ್ತು ಕೆಲಸದಲ್ಲಿ ನಿಷ್ಠೆ ಇಂತಹ ಗುಣಗಳ ಸಂಗಮವನ್ನು ಸುಚಿತ್ರಾ ಸೇನ್‌ರಲ್ಲಿ ಕಂಡೆ" ಎಂದು ಅವರ ಜತೆ 'ದೇವದಾಸ್' ಚಿತ್ರದಲ್ಲಿ ಅಭಿನಯಿಸಿದ್ದ ಖ್ಯಾತ ನಟ ದಿಲೀಪ್‌ಕುಮಾರ್ ಹೇಳಿದ್ದಾರೆ. ೧೯೬೯ರಲ್ಲಿ ಅಮೆರಿಕದಲ್ಲಿ ಪತಿಯ ಅಕಾಲಿಕ ಮರಣ. ಆಗ ಆಕೆಯ ವಯಸ್ಸು ೩೫. ಈ ದುಃಖವನ್ನು ಮರೆಯಲು ವೃತ್ತಿಜೀವನದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡು ಮುಂದಿನ ಚಿತ್ರಗಳಲ್ಲಿ ಅತ್ಯುತ್ತಮ ಅಭಿನಯವನ್ನು ನೀಡಿದರು. ೧೯೭೮ರಲ್ಲಿ ಜನಪ್ರಿಯತೆಯ ಉತ್ತುಂಗದಲ್ಲಿದ್ದು, ಚಿತ್ರ ನಿರ್ಮಾಪಕರು ಹಾಗೂ ದಿಗ್ದರ್ಶಕರು ಅವರು ಹಾಕಿದ ಯಾವುದೇ ಷರತ್ತಿಗೆ ಒಪ್ಪಿಕೊಳ್ಳಲು ತಯಾರಿದ್ದರು. ಹಿಂದಿ ಚಿತ್ರ 'ಆಂಧಿ'ಯಲ್ಲಿ ಅಭಿನಯಿಸಿದ ಅನಂತರ ಬಂಗಾಳಿಯ 'ಪ್ರಣಯ್ ಪಾಶ್' ಚಿತ್ರವನ್ನು ೧೯೭೮ರಲ್ಲಿ ಮುಗಿಸಿದ್ದರು. ಇದಾದ ಕೂಡಲೇ ಹಠಾತ್ತಾಗಿ ಚಿತ್ರರಂಗಕ್ಕೆ ವಿದಾಯ ಹೇಳಿ ಚಿತ್ರ ಜಗತ್ತಿನಿಂದ ಹಾಗೂ ಸಾರ್ವಜನಿಕ ರಂಗದಿಂದ ನಿವೃತ್ತರಾದರು. ಯಾವ ಕಾರಣಕ್ಕಾಗಿ ಈ ವಿಚಿತ್ರ ಹಾಗೂ ಅಂತಿಮ ನಿರ್ಧಾರವನ್ನು ತೆಗೆದುಕೊಂಡರು ಎಂದು ಯಾರಿಗೂ ಊಹಿಸಲೂ ಅವಕಾಶ ಕೊಡದೆ ಹಿಂದೆ ಸರಿದುಕೊಂಡರು. ಅಂದಿನಿಂದ ಇಂದಿನವರೆಗೆ ಸುಮಾರು ೨೫ ವರ್ಷ, ಜನರ ಭೇಟಿ ಹಾಗೂ ಸಂಪರ್ಕಗಳನ್ನು ಸಂಪೂರ್ಣವಾಗಿ ತೊರೆದು ಏಕಾಂತವಾಗಿ ಆಧ್ಯಾತ್ಮಿಕ ಜೀವನ ನಡೆಸುತ್ತಿದ್ದಾರೆ.

ರಾಮಕೃಷ್ಣ ಮಹಾಸಂಘದ ೧೦ನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ವೀರೇಶ್ವರಾನಂದಜಿಯವರಿಂದ ಸುಚಿತ್ರಾ ಸೇನ್ ಮಂತ್ರದೀಕ್ಷೆ ಪಡೆದಿದ್ದರು. ಬೇಲೂರು ಮಠದಲ್ಲಿ ಆಗಿನ ಹಿರಿಯ ಸ್ವಾಮಿಗಳಾಗಿದ್ದ ಭರತ್ ಮಹಾರಾಜ್‌ರ ಜೊತೆ ಆತ್ಮೀಯತೆ ಇತ್ತು. ಆಕೆ ಅವರನ್ನು ತನ್ನ ತಂದೆಯಂತೆ ಭಾವಿಸಿದ್ದರು. ಏಕಾಂತ

ಜೀವನವನ್ನು ಆರಿಸಿಕೊಂಡ ಮೇಲೆ, ದಕ್ಷಿಣೇಶ್ವರ ದೇವಸ್ಥಾನ ಮತ್ತು ಬೇಲೂರು ಮಠಕ್ಕೆ ನಿಯಮಿತವಾಗಿ ಹೋಗುತ್ತಿದ್ದರು. ಪಶ್ಚಿಮ ಬಂಗಾಳದ ಆಂಟ್‌ಪುರದಲ್ಲಿನ ರಾಮಕೃಷ್ಣಾಶ್ರಮದ ಬಗ್ಗೆ ಆಕೆಗೆ ವಿಶೇಷ ಆಕರ್ಷಣೆ. ಕಾರಣ ಇದು ಶ್ರೀರಾಮಕೃಷ್ಣರ ನೇರಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಪ್ರೇಮಾನಂದರ ಜನ್ಮಸ್ಥಾನ ಮಾತ್ರವಲ್ಲದೆ ಇಲ್ಲಿಯೇ ಮುಂದೆ ಸ್ವಾಮಿ ವಿವೇಕಾನಂದರೆಂದು ಖ್ಯಾತರಾದ ನರೇಂದ್ರನಾಥ ಮೊದಲಾದವರೆಲ್ಲರೂ ವಿಧ್ಯುಕ್ತವಾಗಿ ಸಂನ್ಯಾಸ ಜೀವನವನ್ನು ಅಪ್ಪಿಕೊಂಡದ್ದು. ಆಂಟ್‌ಪುರ್‌ಗೆ ಕೊಲ್ಕತಾದಿಂದ ಕಾರಿನಲ್ಲಿ ಒಂದು ಗಂಟೆಯ ಪ್ರಯಾಣ. ತಾನೇ ಸ್ವತಃ ಕಾರು ನಡೆಸಿಕೊಂಡು ಆಂಟ್‌ಪುರ ಆಶ್ರಮಕ್ಕೆ ಆಗಾಗ್ಗೆ ಹೋಗಿ ಅಲ್ಲಿನ ಎಲ್ಲ ಪೂಜಾಕಲಾಪಗಳಲ್ಲಿ ಭಾಗವಹಿಸಿ, ಪ್ರಸಾದ ಸ್ವೀಕರಿಸಿ ಹಿಂತಿರುಗುತ್ತಿದ್ದರು.

ಒಮ್ಮೆ ಖ್ಯಾತ ಲೇಖಕಿ ಕಾಣಾ ಬಸು ಮಿಶ್ರ ಸುಚಿತ್ರಾ ಸೇನ್‌ರಿಗೆ ಫೋನುಮಾಡಿ "ಈಗ ಟಿ.ವಿ.ಯಲ್ಲಿ ನೀವು ಅಭಿನಯಿಸಿರುವ 'ದೀಪ್ ಜ್ವಲೇ ಜಾಯ್' (೧೯೫೯ರ ನಿರ್ಮಾಣ) ಪ್ರದರ್ಶಿಸುತ್ತಿದ್ದಾರೆ. ನಿಜವಾಗಿಯೂ ನಿಮ್ಮ ಅಭಿನಯ ಎಷ್ಟು ಅದ್ಭುತವಾಗಿದೆ!" ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಸ್ವಲ್ಪ ಹೊತ್ತಿನ ಅನಂತರ ಆ ಕಡೆಯಿಂದ "ಆ ಅಭಿನಯ ನಟಿ ಸುಚಿತ್ರಾ ಸೇನ್‌ಳದು. ಅದು ನಾನಲ್ಲ. ಪರದೆಯ ನಟಿ ಸುಚಿತ್ರಾ ಸೇನ್ ಬೇರೆ, ಈಗ ಫೋನಿನಲ್ಲಿ ಮಾತನಾಡುತ್ತಿರುವ ಸುಚಿತ್ರಾ ಸೇನ್ ಬೇರೆ. ಇಬ್ಬರೂ ಭಿನ್ನ ಸ್ತ್ರೀಯರು. ಒಂದು ಕಾಲಕ್ಕೆ ನನ್ನ ಜೀವನೋಪಾಯಕ್ಕಾಗಿ, ಚಿತ್ರರಂಗದಲ್ಲಿ ನೆಲೆಸಿದೆ. ಅದರ ಬಗ್ಗೆ ನನಗೆ ಈಗ ನೆನಪು ಕೂಡ ಮಾಡಿಕೊಳ್ಳಲಾಗುತ್ತಿಲ್ಲ. ಕಾರಣ ಈಗ ನನ್ನ ಪ್ರಪಂಚವೆಲ್ಲ ಶ್ರೀಠಾಕೂರ್(ಶ್ರೀರಾಮಕೃಷ್ಣ)ಮಯವಾಗಿದೆ" ಎಂಬ ಉತ್ತರ ಬಂತು.

ಶ್ರೀರಾಮಕೃಷ್ಣರಿಗೆ ಜಿಲೇಬಿ ಬಹಳ ಇಷ್ಟವೆಂದು ತಿಳಿದು ನಿತ್ಯ ಪೂಜೆಯಲ್ಲಿ, ಸುಚಿತ್ರಾ ಸೇನ್ ಜಿಲೇಬಿಯನ್ನು ನಿವೇದನೆ ಮಾಡುತ್ತಿದ್ದರು ಪೂಜೆ ಮುಗಿದನಂತರ ಜಿಲೇಬಿಯನ್ನು ಭಕ್ತಿಯಿಂದ ಹಣೆಗೆ ಒತ್ತಿಕೊಂಡು, ಆಮೇಲೆ ಸ್ವೀಕರಿಸುತ್ತಿದ್ದರು.

ಖ್ಯಾತ ಹಿನ್ನೆಲೆ ಗಾಯಕಿ ಸಂಧ್ಯಾ ಮುಖರ್ಜಿ ಸುಚಿತ್ರಾ ಸೇನ್ ನಟಿಸಿದ ಚಿತ್ರಗಳಲ್ಲಿ ಹಾಡಿದ್ದಾರೆ. ಅವರು ಹಾಡಿದ ಭಜನೆಗಳು ಭರತ್ ಮಹಾರಾಜರಿಗೆ ಬಹಳ ಇಷ್ಟವಾಗಿದ್ದವು. ಸಂಧ್ಯಾ ಮುಖರ್ಜಿ ಸುಚಿತ್ರಾ ಸೇನರ ಬಗ್ಗೆ, "ಒಮ್ಮೆ ಸುಚಿತ್ರಾ ಫೋನು ಮಾಡಿ ನಾನು ಭರತ್ ಮಹಾರಾಜರ ದರ್ಶನಕ್ಕೆ ಹೋಗುತ್ತಿದ್ದೇನೆ, ನೀವೂ ಬನ್ನಿ ಎಂದು ನನಗೆ ಕಾರಿನಲ್ಲಿ ಬೇಲೂರು ಮಠಕ್ಕೆ ಕರೆದುಕೊಂಡು ಹೋದರು. ದಾರಿಯುದ್ದಕ್ಕೂ ನಾವು ಮಾತನಾಡಿದೆವು. ಒಮ್ಮೆ ಕೂಡ ಅವರು ನಟಿಸಿದ ಸಿನೆಮಾಗಳ ಬಗ್ಗೆಯಾಗಲಿ ಅಥವಾ ನಾನು ಹಾಡಿದ ಸಿನೆಮಾ ಗೀತೆಗಳ ಬಗ್ಗೆಯಾಗಲಿ ಅಪ್ಪಿತಪ್ಪಿಯೂ ಕೂಡ ಪ್ರಸ್ತಾಪ ಮಾಡಲೇ ಇಲ್ಲ. ಅಷ್ಟು ನಿರ್ಲಿಪ್ತರಾಗಿದ್ದರು" ಎಂದು ಹೇಳುತ್ತಾ ತಮ್ಮ ಸ್ನೇಹಿತೆಯ ವಿರಕ್ತಿಯ ಬಗ್ಗೆ ತಿಳಿಸುತ್ತಾರೆ.

"ಸ್ವ-ಇಚ್ಛೆಯಿಂದ ಸುಚಿತ್ರಾ ಸೇನರು ಭೋಗಜೀವನವನ್ನು ತೊರೆದು ನಾಲ್ಕು ಗೋಡೆಗಳ ಮಧ್ಯೆ ಏಕಾಂತವಾಗಿ ಇರಲು ಪ್ರಾರಂಭಿಸಿದಾಗ ಅವರು ಪ್ರಾಪಂಚಿಕ ಆಮಿಷಗಳ ವಿರುದ್ಧ ಹೋರಾಡಬೇಕಾಯಿತು. ಇದರ ಹಿಂದೆ ಅದಮ್ಯ ಸಂಕಲ್ಪ ಮತ್ತು ಆತ್ಮಸಂಯಮ ಇದ್ದಿರಬೇಕು. ಈಗ ೨೫ ವರುಷಗಳು ಕಳೆದವು ಎಂದರೆ ನನಗೆ ನಂಬಲಾಗುತ್ತಿಲ್ಲ. ನಿಜವಾಗಿಯೂ ಅವರ ಈಗಿನ ಜೀವನ ಒಂದು ತಪಸ್ಸು.

"ಸುಚಿತ್ರಾ ಸೇನ್‌ರ ಜೀವನ ಒಂದು ಯಶೋಗಾಥೆ. ಸ್ವಂತ ಪರಿಶ್ರಮ ಹಾಗೂ ಪ್ರತಿಭೆಯಿಂದ ತಮ್ಮ ಪ್ರಭಾವಲಯವನ್ನು ನಿರ್ಮಿಸಿದರು. ಆಗ ಅವರಿಗಿದ್ದ ಅಯಸ್ಕಾಂತೀಯ ಆಕರ್ಷಣೆಯನ್ನು ಯಾರೂ ಅಲ್ಲಗಳೆಯಲಾರರು. ೨೫ ವರುಷಗಳು ಕಳೆದರೂ ನಮ್ಮ ಮಾತುಕತೆಗಳಲ್ಲಿ ಯಾವಾಗಲೂ ಅವರ ಪ್ರಸ್ತಾಪ ಬರುತ್ತದೆ. ಬಂಗಾಳಿ ಜನಜೀವನದಲ್ಲಿ ಇವತ್ತಿಗೂ ಅವರಿಗೆ ಒಂದು ವಿಶೇಷ ಸ್ಥಾನವಿದೆ" ಎಂದು ಬಂಗಾಳಿ ಸಿನೆಮಾದ ಶ್ರೇಷ್ಠ ನಟಿ ಮಾಧವಿ ಮುಖರ್ಜಿ ತಮ್ಮ ವೃತ್ತಿಬಂಧು ಸುಚಿತ್ರಾ ಸೇನ್‌ರ ಬಗ್ಗೆ ತಿಳಿಸಿದ್ದಾರೆ.

ಆಕೆ ತನ್ನ ಕಠಿಣ ಏಕಾಂತವಾಸದಿಂದ ಕೇವಲ ಎರಡು ಸಾರಿ ಸಾರ್ವಜನಿಕರಿಗೆ ಕಾಣಿಸಿದರು. ಉತ್ತಮಕುಮಾರ್ ಜತೆಯಲ್ಲಿ ೩೧ ಚಿತ್ರಗಳಲ್ಲಿ ನಟಿಸಿ, ಇಬ್ಬರೂ ಅಪಾರ ಜನಪ್ರಿಯತೆಯನ್ನು ಗಳಿಸಿದ್ದರು. ತಾ. ೨೪.೭.೮೦ ರಂದು ಉತ್ತಮಕುಮಾರರ ನಿಧನವಾಯಿತು. ಸುಚಿತ್ರಾ ಸೇನ್ ಆ ದಿನ ಅವರ ಮನೆಗೆ ಹೋಗಿ ಅವರ ಪಾರ್ಥಿವ ಶರೀರಕ್ಕೆ ಮಾಲೆ ಅರ್ಪಿಸಿ ಗೌರವ ತೋರಿಸಿ ಕೂಡಲೆ ಹೊರಟುಬಂದರು. ಇನ್ನೊಮ್ಮೆ ಭರತ್ ಮಹಾರಾಜರ ದೇಹಾಂತ್ಯವಾದಾಗ, ಅವರ ಪುಣ್ಯಶರೀರದ ಮುಂದೆ ಬಹಳ ಹೊತ್ತು ನಿಂತುಕೊಂಡು ಶ್ರದ್ಧಾಂಜಲಿಯನ್ನು ಸಮರ್ಪಿಸಿದರು.

ಹೀಗೆ ಇಬ್ಬರು ಅಪ್ರತಿಮ ನಟಿಯರು ಶ್ರೀರಾಮಕೃಷ್ಣರಿಂದ ಪ್ರಭಾವಿತರಾಗಿ, ತಮ್ಮ ಜೀವನಗತಿಯನ್ನು ಬದಲಾಯಿಸಿಕೊಂಡು ಜನ್ಮಸಾರ್ಥಕ ಮಾಡಿಕೊಂಡರು.

(ಆಧಾರ : ಶೋಮ್ ಎ. ಚಟರ್ಜಿಯವರು ಇಂಗ್ಲಿಷಿನಲ್ಲಿ ಬರೆದ Suchitra Sen : A Legend in Her Lifetime)

**ಆಶ್ರಮದ ಕಾರ್ಯಕ್ರಮಗಳು**

**ಆಗಸ್ಟ್ 2004**

| | | |
|---|---|---|
| **ಏಕಾದಶಿ** | **11** | **ಬುಧವಾರ** |
| **ಏಕಾದಶಿ** | **26** | **ಗುರುವಾರ** |
| **ಸ್ವಾಮಿ ನಿರಂಜನಾನಂದ ಜಯಂತಿ** | **30** | **ಸೋಮವಾರ** |

**ಪ್ರತಿ ಶನಿವಾರ ಇಂಗ್ಲಿಷಿನಲ್ಲೂ, ಪ್ರತಿ ಗುರುವಾರ ಮತ್ತು ಭಾನುವಾರಗಳಂದು ಕನ್ನಡದಲ್ಲೂ ಸಂಜೆ ೬ ರಿಂದ ೭ ಗಂಟೆಯವರೆಗೆ ಆಶ್ರಮದಲ್ಲಿ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.**